ಅದನ್ನೇ ದಿಟ್ಟಿಸುತ್ತಾ ಗಂಟೆಗಟ್ಟಲೇ ಕೂತುಬಿಡುತ್ತಿದ್ದ. ಅದಾದ ಮೇಲೆ ಪೂಂಗೊಡಿ ಬಲು ಆಸ್ಥೆಯಿಂದ ತಂದು ನೆಟ್ಟಿದ್ದ ಹಣ್ಣಿನ ಗಿಡಗಳ ಸಾಮೀಪ್ಯದಲ್ಲಿ ಮತ್ತಷ್ಟು ಹೊತ್ತು ಕಳೆಯುತ್ತಿದ್ದ. ಅವುಗಳಲ್ಲಿ ಸೀಬೆ, ಸಪೋಟ ಗಿಡಗಳು ನೀವ್ಯಾರೂ ನೀರು, ಗೊಬ್ಬರ ಅಂತ ಕೊಡದಿದ್ರೂ ನಾವು ಚಿಗಿತೇ ಚಿಗುರ್ತೀವಿ, ಹಣ್ಣು ಬಿಟ್ಟೇ ತೀರ್ತೀವಿ, ಅನ್ನುವಂತೆ ಹುಲುಸಾಗಿದ್ದವು. ಅವಕ್ಕೆ ನೇರಳೆ, ಚಕೋತಗಳೂ ಸಾಥು ಕೊಟ್ಟಿದ್ದವು. ಮಿಕ್ಕ ಗಿಡಗಳಲ್ಲಿ ಕೆಲವು ಬಣಗುಡುತ್ತಿದ್ದರೆ ಉಳಿದವುಗಳು ಅಸುನೀಗಿದ್ದವು.

ಸಣ್ಣದೊಂದು ಅಪಘಾತ, ಅದರ ನೆಪದಲ್ಲಿ ಕೈ ಕೊಟ್ಟ ಆರೋಗ್ಯ ಮನವಾಳನ್‌ನ ಲವಲವಿಕೆಯನ್ನೇ ಕಿತ್ತುಕೊಂಡಿದ್ದಲ್ಲದೆ ಹತ್ತಿರತ್ತಿರ ಹತ್ತು ವರ್ಷ ಅವನ ಭಾರತಕ್ಕೆ ಹೊರಡುವ ಹುಮ್ಮಸ್ಸನ್ನೇ ನುಂಗಿಕೊಂಡಿತ್ತು. ಆ ನಂತರ ಮನವಾಳನ್ ಮತ್ತೆ ಹೊಲವನ್ನು ನೋಡುತ್ತೇನೆಂಬ ಆಸೆಯನ್ನೇ ಬಿಟ್ಟಿದ್ದ. ಆದರೆ ಗುರ್‍ಸ್ವಿದ್ದನ ಮಾತುಗಳು ಮನವಾಳನ್ನನ್ನು ಹಣ್ಣಾಯಿ ನೀರ್ಗಾಯಿ ಮಾಡಿದ್ದವು. ಆಗ ಹೊಲವನ್ನು ನೋಡಬೇಕೆಂಬ ಅವನ ತುಡಿತದ ಎದುರು ಮಕ್ಕಳ ಮಾತುಗಳು, ಮಿಕ್ಕೆಲ್ಲ ಸಂಗತಿಗಳೂ ಮಕಾಡೆ ಮಲಗಿಬಿಟ್ಟಿದ್ದವು.

ಹೊರಡುವಾಗ ಮನವಾಳನ್ ಹೊಲಕ್ಕೆ ಸಂಬಂಧಿಸಿದ ದಾಖಲೆ ಪತ್ರಗಳನ್ನೆಲ್ಲಾ ಜೋಪಾನವಾಗಿ ಎತ್ತಿಟ್ಟುಕೊಂಡಿದ್ದ. ಹೊಲವನ್ನು ಒತ್ತರಿಸಿಕೊಂಡಿದ್ದವನ ಮೇಲೆ ಕೋರ್ಟಿನಲ್ಲಿ ಕೇಸು ಹಾಕಬೇಕು ಎಂಬುದಾಗಿ ತೀರ್ಮಾನಿಸಿಕೊಂಡಿದ್ದ. ಮಕ್ಕಳಿಬ್ಬರ ಬಳಿ ಈ ಬಗ್ಗೆ ಮಾತೂ ಹಾಕಿದ್ದ. ಅದಕ್ಕವರು ಎಳ್ಳಷ್ಟೂ ಕುತೂಹಲ ತೋರದಿದ್ದುದು, ಸಾಲದ್ದಕ್ಕೆ ಬುದ್ಧಿವಾದ ಹೇಳಿದ್ದು ಮನವಾಳನ್‌ಗೆ ಪಿಚ್ಚೆನಿಸಿತ್ತು. ಕೆಲವೊಮ್ಮೆ ಮಕ್ಕಳ ಅಂಥ ನಿರ್ಭಾವುಕ ನಡೆ ಕಳ್ಳುಬಳ್ಳಿ ಸಂಬಂಧವನ್ನೇ ವಸಕಿಹಾಕಿಕೊಂಡು ನಿರಾಳವಾಗಿ ಬಿಡಬೇಕು, ಅನ್ನುವಷ್ಟರ ಮಟ್ಟಿಗೆ ಮನವಾಳನ್‌ನ ಮನಸ್ಸನ್ನು ಗಾರು ಮಾಡಿಬಿಡುತ್ತಿತ್ತು.

ಮತ್ತದೇ ಭಾವ ಮರುಕಳಿಸಿ ಮನವಾಳನ್ ಭಾವುಕನಾದ. ಈ ಇಹದ ಬದುಕು ಇಲ್ಲಿಗೇ ಮುಗಿದುಬಿಡಲಿ, ಎಂಬಂತೆ ತಾನು ಕೂತಿದ್ದ ಜಾಗದಿಂದ ಸುತ್ತಲಿನದನ್ನೆಲ್ಲಾ ಮತ್ತೊಮ್ಮೆ ಕಣ್ತುಂಬಿಕೊಳ್ಳತೊಡಗಿದ. ಹಾಳು ಪಟ್ಟಣದ ಏಕತಾನತೆಯಲ್ಲಿ ಸಾಯುವ ಬದಲು ತನ್ನ ಕೊನೆಗಾಲ ಇಲ್ಲೇ ಯಾಕೆ ಆಗಿಬಿಡಬಾರದು? ಅಮೂರ್ತ ರೂಪದಲ್ಲಿ ತನ್ನೊಳಗಿರುವ ಪೂಂಗೊಡಿಗೆ ಮೂರ್ತ ರೂಪದ ಸಮಾಧಿ, ಅದರ ನೆಪದಲ್ಲಿ ಆ ಹೊಲದ ಹಂಗು... ಯೋಚಿಸುತ್ತಾ ಮೋಹವಳಿದವನಂತೆ, ತನ್ನೊಳಗಿನ ತಾಕಲಾಟಗಳಿಗೆಲ್ಲಾ ತಕ್ಕ ಉತ್ತರ ಕಂಡುಕೊಂಡವನಂತೆ ನಿರಾಳವಾಗುತ್ತಿದ್ದ ಮನವಾಳನ್‌ಗೆ ಇದ್ದಕ್ಕಿದ್ದಂತೆ ಚರ್ಚಿನ ಗಂಟೆ ಹೊಡೆದ ಸದ್ದಾದಂತಾಯ್ತು. ಚಕ್ಕನೆ ಅತ್ತ ತಿರುಗಿದ. ಅದರ ಬಾಗಿಲಿಗೆ ಹಾಕಿದ್ದ ಬೀಗ ಹಾಕಿದಂಗೇ ಇತ್ತು. ಹಾಗಾದರೆ ತನಗೆ ಕೇಳಿಸಿದ್ದು?

## 5

ಇದೇ ನನ್ನ ಕಡೆಯ ಭೇಟಿ? 'ಹೌದು' ಮನವಾಳನ್ ತನಗೆ ತಾನೇ ಹೇಳಿಕೊಂಡ. ಕಾರನ್ನು ಹತ್ತುವ ಮುನ್ನ ತಾನು ಕೆಲಸ ಮಾಡುತ್ತಿದ್ದ ಜಾಗವನ್ನೊಮ್ಮೆ ನೋಡಬೇಕೆನಿಸಿತು. ತಾನಿದ್ದಾಗ ಅಲ್ಲಿ ಮಾಮೂಲಿ ಓಡಾಡುತ್ತಿದ್ದ ದಾರಿಗೆ ವಾಹನಗಳಾವೂ ಹೋಗದಂತೆ ಅಡ್ಡಲಾಗಿ ಚರಂಡಿಯೊಂದನ್ನು ತೆಗೆಯಲಾಗಿತ್ತು. ಅದನ್ನು ದಾಟಿ ಹತ್ತಿರ ಹೋದವನಿಗೆ ಕೆಲಸ ನಿಂತು ಯಾವ ಕಾಲವೋ ಆಗಿದೆ ಅನ್ನುವುದಕ್ಕೆ ತುಕ್ಕಿಡಿದು ನಿಂತಿದ್ದ ಅಲ್ಲಿನ ಯಂತ್ರಗಳು ಪುರಾವೆ ಒದಗಿಸಿದವು. ಅವುಗಳನ್ನು ತಟಾಯ್ದು ದೊಡ್ಡದೊಂದು ಕಟ್ಟಡದ ಎದುರು ನಿಂತ. ಅಲ್ಲಿ ಕೆಲವು ಮಂದಿ ಕೂತು ಹರಟುತ್ತಿದ್ದರು. ಅವರೊಳಗೆ ಯಾವೊಂದು ಪರಿಚಿತ ಮುಖವೂ ಕಾಣಲಿಲ್ಲ. ಯಾರೊಬ್ಬರೂ ಮನವಾಳನ್‌ನನ್ನು ಗುರುತಿಸಲಿಲ್ಲ. ಆ ಕಟ್ಟಡದ ಹಿಂಬದಿಗೆ ಸಾಲು ಸಾಲು ಮೆಟ್ಟಿಲುಗಳಿದ್ದ ದೊಡ್ಡದೊಂದು ಹೊಂಡವಿತ್ತು. ಅದರ